201 (427) : ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿರುವ ಒಟ್ಟು ಪಟ್ಟಣ ಪಂಚಾಯತ್‌ಗಳ ಸಂಖ್ಯೆ ಎಷ್ಟು; ಈ ಪಟ್ಟಣ ಪಂಚಾಯತ್‌ಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ನಿಗದಿಪಡಿಸಿದ ಹಣವೆಷ್ಟು?

2) ಕುಂದಗೋಳ ತಾಲ್ಲೂಕು ಪಟ್ಟಣ ಪಂಚಾಯತಿಗೆ 2001 ರಿಂದ 2004 ರವರೆಗೆ ಎಷ್ಟು ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

1) 98(2 ಅಧಿಸೂಚಿತ ಪ್ರದೇಶಗಳನ್ನು ಸೇರಿದಂತೆ); ಈ ಪಟ್ಟಣ ಪಂಚಾಯತ್‌ಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ರೂ. 21,38,55,917 ಗಳನ್ನು ನಿಗದಿಪಡಿಸಲಾಗಿದೆ.

2) ಕುಂದಗೋಳ ತಾಲ್ಲೂಕು ಪಟ್ಟಣ ಪಂಚಾಯತಿಗೆ 2001 ರಿಂದ 2004 ರವರೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ ಮೊತ್ತ ರೂ. 64,86,897.

ಧಾರವಾಡ ಜಿಲ್ಲೆಯಲ್ಲಿಯ ಮುನ್ಸಿಫ್ ಕೋರ್ಟ್‌ಗಳು

202 (430) : ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಮುನ್ಸಿಫ್ ನ್ಯಾಯಾಲಯಗಳು ಇವೆ. ಎಷ್ಟು ನ್ಯಾಯಾಲಯಗಳು ಸ್ವಂತ ಕಟ್ಟಡಗಳು ಹೊಂದಿರುವುದಿಲ್ಲ. ಅಂತಹ ನ್ಯಾಯಾಲಯಗಳಿಗೆ ಕಟ್ಟಡ ನಿರ್ಮಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ.

ಆ) ಕುಂದಗೋಳ ಮುನ್ಸಿಫ್ ಕೋರ್ಟ್ ಕಟ್ಟಡ ದುರಸ್ಥಿಯಲ್ಲಿದ್ದು. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಅವುಗಳನ್ನು ದುರಸ್ಥಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) 15 ನ್ಯಾಯಲಯಗಳಿವೆ. ಕಲ್ಲಪ್ಪಟಗಿಯಲ್ಲಿರುವ ಜೆ.ಎಂ.ಎಫ್.ಸಿ. (ಕಿರಿಯ ವಿಭಾಗ) ದ ಕೋರ್ಟ್‌ಗೆ ಸ್ವಂತ ಕಟ್ಟಡ ಇರುವುದಿಲ್ಲ. ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಆ) ಹೌದು. ಕುಂದಗೋಳದಲ್ಲಿರುವ ಕೋರ್ಟ್ ಕಟ್ಟಡ ಶೀಥಿಲಾವಸ್ಥೆಯಲ್ಲಿದೆ. ಸದರಿ ಕೋರ್ಟ್‌ನ್ನು ದುಂದಗೋಳದಲ್ಲಿರುವ ನ್ಯಾಯಾಧೀಶರ ವಸತಿ ಗೃಹಕ್ಕೆ ಬದಲಾಯಿಸಲಾಗಿದ್ದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ವರದಿಯ ಮೇರೆಗೆ ಹಾಲಿ ನ್ಯಾಯಾಲಯ ಕಟ್ಟಡವನ್ನು ರಿಪೇರಿ ಮಾಡಲು ಸಾಧ್ಯವಿಲ್ಲ. ಹಾಲಿ ನ್ಯಾಯಾಲಯ ಕಟ್ಟಡವನ್ನು ಕೆಡವಿ ಅದೇ ಸ್ಥಳದಲ್ಲಿ ನೂತನ ನ್ಯಾಯಾಲಯ ಕಟ್ಟಡವನ್ನು ಕಟ್ಟಲು ಯೋಜಿಸಲಾಗಿದ್ದು. ಈ ಬಗ್ಗೆ ಮುಂದಿನ ಸಾಲಿನ ಆಯವ್ಯವಯದಲ್ಲಿ ಸದರಿ ಕಾಮಗಾರಿಯನ್ನು ಸೇರಿಸುವ ಬಗ್ಗೆ ಕ್ರಮಕ್ಕೈಗೊಳ್ಳಲಾಗುವುದು.

203 (618) : ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?